S.F

Reg. No. | | | | | | | | | |

# BASKALN 201/BSWKALN 201/HRDKALN 201/ BVAKALN 201

## II Semester B.A./B.S.W./B.A. (HRD)/B.V.A. Degree Examination, September 2022 (NEP – 2020) (2021-22 Batch Onwards) KANNADA LANGUAGE – II

Time : 2 Hours Max. Marks : 60

I. ಕೆಳಗಿನ ಮೂರು ಪ್ರಶ್ನೆಗಳಿಗೆ ಉತ್ತರಿಸಿರಿ : **(3×8=24)**

1) ಅಶ್ವತ್ಥಾಮನು ಬಾಲವಧಾ ಪಾತಕಕ್ಕೆ ಒಳಗಾದ ಸನ್ನಿವೇಶವನ್ನು ರನ್ನಕವಿಯು ಹೇಗೆ ಚಿತ್ರಿಸಿದ್ದಾನೆ ? ವಿವರಿಸಿರಿ.

**ಅಥವಾ**

ಆತಿಭಕ್ತನ ಕಾಯಕನಿಷ್ಠೆ ಮತ್ತು ಭಕ್ತಿಯ ಪರಾಕಾಷ್ಠೆಯು ಹರಿಹರನ ರಗಳೆಯಲ್ಲಿ ಮೂಡಿಬಂದ ಬಗೆಯನ್ನು ವಿವರಿಸಿರಿ.

2) ಬದುಕಿನ ಸಾಫಲ್ಯತೆಯ ಕುರಿತು ಹಡೆವೆಂಕಟ ಮತ್ತು ಅನಂತುವಿನ ಧೋರಣೆಗಳನ್ನು ವಿವರಿಸಿರಿ.

**ಅಥವಾ**

ಮಾನವ ಜೀವನದ ಸುಖದ ಕೇಂದ್ರವು ಮನಸ್ಸೇ ಆಗಿದೆ ಎಂಬ ವಿಚಾರವನ್ನು ಸಣ್ಣಗುಡ್ಡಯ್ಯರ ಲೇಖನದ ಹಿನ್ನೆಲೆಯಲ್ಲಿ ವಿವರಿಸಿರಿ.

3) ನಗರಕ್ಕೆ ಬಂದ ಚಂದ್ರನು ಹೊಸ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ನೆರವಾದ ಅಂಶಗಳ ಕುರಿತು ವಿವರಿಸಿರಿ.

**ಅಥವಾ**

'ಬದುಕು ಎನ್ನುವುದು ನಿರಂತರ ಮರುಹುಟ್ಟಿನ ಸುದೀರ್ಘ ಪಯಣ' ಎಂಬ ವಿಚಾರವನ್ನು ಕಾದಂಬರಿಯ ಹಿನ್ನೆಲೆಯಲ್ಲಿ ಚರ್ಚಿಸಿರಿ.

II. ಕೆಳಗಿನ ಮೂರು ಪ್ರಶ್ನೆಗಳಿಗೆ ಉತ್ತರಿಸಿರಿ : (3×5=15)

1) ಸಕಲೇಶ ಮಾದರಸನ ವಚನಗಳ ಮಹತ್ವವನ್ನು ವಿವರಿಸಿರಿ.

**ಅಥವಾ**

ಜನಪದ ಮುಕ್ತಕಗಳಲ್ಲಿ ತವರು ಮನೆಯ ಕುರಿತಾಗಿರುವ ಅಭಿಮಾನವು ಹೇಗೆ ವ್ಯಕ್ತಗೊಂಡಿದೆ ? ವಿವರಿಸಿರಿ.

2) ಹೊಸ ತಲೆಮಾರಿನ ಯುವಕರಿಗೆ ಗ್ರಾಮ ಜೀವನದ ಮಹತ್ವವನ್ನು 'ತಿನ್ನುವ ಅನ್ನ ಮತ್ತು ಬಹುತ್ವ' ಲೇಖನವು ಹೇಗೆ ತಿಳಿಯಪಡಿಸುತ್ತದೆ ? ವಿವರಿಸಿರಿ.

**ಅಥವಾ**

ಹುಲಿಯು ನರಭಕ್ಷಕನಾಗಲು ಕಾರಣ ಮತ್ತು ಅದರ ಚಾಣಾಕ್ಷತನಗಳು 'ವೈನಾಡಿನ ನರಭಕ್ಷಕ' ಲೇಖನದಲ್ಲಿ ಹೇಗೆ ಚಿತ್ರಣಗೊಂಡಿದೆ ? ವಿವರಿಸಿರಿ.

3) ಸಾಂಪ್ರದಾಯಿಕ ಸಮಾಜದಲ್ಲಿ ನಡೆಯುತ್ತಿರುವ ಸ್ತ್ರೀದಮನ ಹಾಗೂ ಅದಕ್ಕೆ ಉತ್ತರವನ್ನು ಕಂಡುಕೊಳ್ಳುವ ರೀತಿಯು ಕಾದಂಬರಿಯಲ್ಲಿ ಹೇಗೆ ಮೂಡಿಬಂದಿದೆ ? ವಿವರಿಸಿರಿ.

**ಅಥವಾ**

ಕಾದಂಬರಿಯಲ್ಲಿ ಕಂಡುಬರುವ ನೀಲಗಂಗಯ್ಯನವರ ಪಾತ್ರವನ್ನು ಪರಿಚಯಿಸಿರಿ.

III. ಕೆಳಗಿನವುಗಳಲ್ಲಿ **ಒಂದು** ಪದ್ಯದ ಭಾವಾರ್ಥದೊಂದಿಗೆ ಸಂದರ್ಭ ಸಹಿತ ಸ್ವಾರಸ್ಯವನ್ನು ಬರೆಯಿರಿ : (1×5=5)

1) ಅತ್ತಲಸುರಾರಿ ಬೆಸಸಿದ
ನಿತ್ತಲ್ ರುದ್ರಾವತಾರನೆಟಿದೊಯ್ದಪನೆಂ
ದತ್ತ ಪುಲಿಯಿತ್ತ ದರಿಯೆಂ
ದತ್ತಿತ್ತಡಿಯಿಡದೆ ಲಕ್ಷ್ಮ ತಳವೆಳಗಾದಳ್.

2) ಬೆಚ್ಚನೆಯ ಗಾಳಿ ತುಂಬಿಕೊಳ್ಳಲು ಪುಪ್ಪುಸದೊಳಕ್ಕೆ
ಮಣ್ಣ ತಿಮಿಂಗಿಲ ಎದ್ದು ನಿಂತಂತೆ ದೂರದಲ್ಲಿನ್ನೂ
ಸುಣ್ಣ ಬಳಿಯದ ಮಹಲು :
ಅದರ ಭುಜದ ಮೇಲಿನ ಕೂಲಿಕಾರರ ಬಣ್ಣಬಣ್ಣದ ಸಾಲು :
ಮಣ್ಣು ಇಟ್ಟಿಗೆಯಾಗಿ ಬಳಿಕ ಕಟ್ಟಡವಾಗಲು
ಇಷ್ಟಿಷ್ಟೆ ಏರಿದ ಎತ್ತರದ ಜೀವಂತ ಸೀಮಾರೇಖೆ.

IV. ಕೆಳಗಿನವುಗಳಲ್ಲಿ **ಎರಡರ** ಸಂದರ್ಭ ಸಹಿತ ಸ್ವಾರಸ್ಯವನ್ನು ಬರೆಯಿರಿ : **(2×4=8)**

1) ತರುಗಳ ಮಧ್ಯದ ಸುರತರುವಂದದಿ
2) ಕೂಸಿದ್ದ ಮನೆಗೆ ಬೀಸಣಿಗೆ ಯಾತಕ
3) ಹತ್ತರೊಳಗೊಂದಾಣಿಮುತ್ತು ಈ ಕಡಲ ತೀರದ ಮರ
4) ಬೇಡಿ ಬೇಡಿ ಕಾಯವಾಯಿತು ಅಕ್ಷಯ ಕೃಷ್ಣ ಕಾವ್ಯ

V. ಕೆಳಗಿನ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯರೂಪದಲ್ಲಿ ಉತ್ತರಿಸಿರಿ : **(8×1=8)**

1) ಸಕಲೇಶ ಮಾದರಸನ ಅಂಕಿತ ಯಾವುದು ?
2) ಸೈರಂಧ್ರಿ ಎಂದರೆ ಯಾರು ?
3) 'ಸೂರ್ಯನ ಕುದುರೆ' ಲೇಖನವನ್ನು ಬರೆದವರು ಯಾರು ?
4) ಪೂರ್ಣಚಂದ್ರ ತೇಜಸ್ವಿಯವರ ಹುಟ್ಟೂರು ಯಾವುದು ?
5) ಆಟಿ ತಿಂಗಳ ಅಮಾವಾಸ್ಯೆಯ ದಿನ ಕರಾವಳಿಯ ಜನರು ಯಾವ ಮರದ ರಸವನ್ನು ಕುಡಿಯುತ್ತಾರೆ ?
6) ಕಾದಂಬರಿಯ ನಾಯಕ ಚಂದ್ರನಿಗೆ ಶಿಕ್ಷಣ ಪಡೆಯಲು ಆರ್ಥಿಕ ನೆರವು ನೀಡಿದ ಮುಸಲ್ಮಾನ ವ್ಯಕ್ತಿ ಯಾರು ?
7) ರಾಮ್‌ಚಂದ್ ಅವರ ಮನೆಯಲ್ಲಿ ಚಂದ್ರನು ಯಾವ ಕೆಲಸವನ್ನು ನಿರ್ವಹಿಸಿದ ?
8) ಚಂದ್ರನ ತಾಯಿಗೆ ಖಾನಣ್ಣ ಯಾವ ಎಲೆಗಳನ್ನು ತಂದುಕೊಡುತ್ತಿದ್ದನು ?